ನಿಮ್ಮೊಡನೆ

# ಅಸಮಾನ ಅಭಿವೃದ್ಧಿಯ ಆತಂಕ

ಸರ್ಕಾರ ಪ್ರಜೆಗಳ ಮೇಲೆ ಹೇರುತ್ತಿರುವ ನೂರಾರು ತೆರಿಗೆಗಳಿಂದ ಸಂಗ್ರಹವಾಗುವ ಹಣದಲ್ಲಿ ಶೇಕಡಾ 63ರಷ್ಟು ಆಡಳಿತದ ಖರ್ಚಿಗೆ ಹೋಗುತ್ತಿದೆ ಎನ್ನುವುದೇ ಒಂದು ದುರಂತ. ಆಡಳಿತ ನಡೆಸಲು, ಸಚಿವರು, ಶಾಸಕರು, ಅಧಿಕಾರಸ್ಥರನ್ನು ಸಲಹಲು ಮತ್ತು ನೌಕರಶಾಹಿಗೆ ಸಂಬಳ ನೀಡಲೇ ಇಷ್ಟೊಂದು ಹಣ ಖರ್ಚಾದರೆ, ಇನ್ನು ಅಭಿವೃದ್ಧಿಗೆ ಹಣ ಎಲ್ಲಿದೆ?

2011ರ ಸಾಮಾಜಿಕ, ಆರ್ಥಿಕ ಹಾಗೂ ಜಾತಿ ಗಣತಿಯ ವಿವರಗಳನ್ನು ನೋಡಿದರೆ ಗಾಬರಿಯಾಗುತ್ತದೆ. ಇಷ್ಟು ವರ್ಷಗಳ ಪ್ರಜಾಪ್ರಭುತ್ವದ ಆಡಳಿತದ ಬಳಿಕವೂ ಪ್ರಜೆಗಳ ದೊಡ್ಡ ಸಮೂಹವೊಂದು ಮೂಲಸೌಲಭ್ಯಗಳಿಂದ ವಂಚಿತವಾಗಿ ಅಥವಾ ಅಗಾಧ ಆರ್ಥಿಕ ಅಸಮಾನತೆಗಳಿಗೆ ಒಳಗಾಗಿ ಬದುಕುತ್ತಿದೆಯೆ.. ಎನ್ನುವ ಅಚ್ಚರಿ ಉಂಟಾಗುತ್ತದೆ. ದೇಶದಲ್ಲಿ 5.37 ಕೋಟಿ ಜನರಿಗೆ ಸ್ವಂತದ್ದೆನ್ನುವ ಒಂದು ತುಂಡು ಭೂಮಿ ಇಲ್ಲ. ಅಂದರೆ ದೇಶದಲ್ಲಿ ಮೂರರಲ್ಲಿ ಒಬ್ಬರಿಗೆ ಸ್ವಂತದ್ದೆನ್ನುವ ನೆಲ ಇಲ್ಲ. 2.37 ಕೋಟಿ ಕುಟುಂಬಗಳು ಇನ್ನೂ ಗುಡಿಸಲುಗಳಲ್ಲಿ ಬದುಕುತ್ತಿವೆ. ಒಟ್ಟಾರೆ 26 ಲಕ್ಷ ಕುಟುಂಬಗಳು ಕೂಲಿ ಕೆಲಸವನ್ನೇ ನೆಚ್ಚಿಕೊಂಡಿವೆ. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ 51ರಷ್ಟು ಜನರು ಈಗಲೂ ಕೂಲಿಕೆಲಸ ಮಾಡುತ್ತಿದ್ದಾರೆ. ಅಂದರೆ ಈ ಕುಟುಂಬಗಳಿಗೆ ಪ್ರತಿದಿನ ವರಮಾನದ ಗ್ಯಾರಂಟಿ ಇಲ್ಲ.

ಪ್ರಜಾಪ್ರಭುತ್ವ ಎನ್ನುವುದು ಎಲ್ಲರನ್ನೂ ಒಳಗೊಳ್ಳುವ, ಎಲ್ಲರಿಗೂ ಸಮಾನ ಸೌಲಭ್ಯಗಳನ್ನು ವಿಸ್ತರಿಸುವ ವ್ಯವಸ್ಥೆ ಎಂದು ನಂಬಿಕೊಂಡು ಬಂದಿದ್ದೇವೆ. ಮತದಾನದ ಹಕ್ಕಿನಲ್ಲಿ 'ಒಬ್ಬರಿಗೆ ಒಂದು ವೋಟು' ಎಂಬ ಸಮಾನತೆಯನ್ನು ಸ್ಥಾಪಿಸಿರುವ ನಾವು, ಮತದಾನದ ಮೂಲಕ ಗೆದ್ದು ಬಂದ ಸರ್ಕಾರ ಎಲ್ಲರ ಒಳಿತಿಗಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಲು ಏಕೆ ಸಾಧ್ಯವಾಗಿಲ್ಲ? ಅಥವಾ ಸರ್ಕಾರಗಳು ಕೆಲಸ ಮಾಡಿದರೂ ಅದರ ಫಲ ಎಲ್ಲರಿಗೂ ಸರಿಯಾಗಿ ಸಿಗುತ್ತಿಲ್ಲವೆ? 2011ರ ಗಣತಿಯು ಗ್ರಾಮಭಾರತದ ಕರಾಳ ಚಿತ್ರಣವನ್ನೇ ತೆರೆದಿಟ್ಟಿದೆ. ದೇಶದ 640 ಜಿಲ್ಲೆಗಳಲ್ಲಿ ನಡೆಸಲಾದ ಈ ಗಣತಿಯ ಪ್ರಕಾರ, ಹಳ್ಳಿಗಾಡಿನ ಜನರ ಸ್ಥಿತಿ ಅತ್ಯಂತ ಶೋಚನೀಯವಾಗಿದ್ದು, ಶೇಕಡಾ 69ರಷ್ಟು ಕುಟುಂಬಗಳ ಮಾಸಿಕ ಆದಾಯ ರೂ.5000 ಅಥವಾ ಅದಕ್ಕಿಂತ ಕಡಿಮೆ ಇದೆ ಎನ್ನುವುದು ಏನನ್ನು ಸೂಚಿಸುತ್ತದೆ? ನಮ್ಮೆಲ್ಲ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡುವ ಕೋಟ್ಯಂತರ ರೂಪಾಯಿಗಳು ಎಲ್ಲಿಗೆ ಹೋಗುತ್ತಿವೆ? ಸರ್ಕಾರದ ಯೋಜನೆಗಳ ಅಂತಿಮ ಫಲಾನುಭವಿಗಳು ನಿಜಕ್ಕೂ ಯಾರು? ಸರ್ಕಾರಿ ಯೋಜನೆಗಳ ಫಲ ಅರ್ಹರಿಗೆ ತಲುಪಿದ್ದರೆ, ಹಳ್ಳಿಗಾಡಿನ ಶೇಕಡಾ 69ರಷ್ಟು ಕುಟುಂಬಗಳು ಹೀಗೆ ಕಡುಬಡತನದಲ್ಲಿಯೇ ಉಳಿದುಕೊಂಡಿರಲು ಸಾಧ್ಯವಿತ್ತೆ? ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಸೌಲಭ್ಯ ತಲುಪುವುದಿಲ್ಲವೆಂದಾದರೆ ಈ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಅರ್ಥವಿದೆಯೆ? ಅಥವಾ ಯೋಜನೆಗಳ ಲಾಭ ಫಲಾನುಭವಿಗಳಿಗೆ ತಲುಪುವಂತೆ ಮಾಡಲು ಬೇರೆ ದಾರಿಗಳನ್ನೇನಾದರೂ ಹುಡುಕಿಕೊಳ್ಳಬೇಕೆ?

ಕರ್ನಾಟಕದ ಚಿತ್ರಣವನ್ನೇ ನೋಡಿ. ರಾಜ್ಯದಲ್ಲಿ 15 ಸಾವಿರ ಮಲ ಹೊರುವ ಕುಟುಂಬಗಳಿವೆ! 9650 ಕುಟುಂಬಗಳು ಭಿಕ್ಷಾಟನೆಯನ್ನೇ ನಂಬಿ ಬದುಕುತ್ತಿವೆ. 3 ಲಕ್ಷ ಕುಟುಂಬಗಳು ಗುಡಿಸಲುಗಳಲ್ಲಿ ವಾಸ ಮಾಡುತ್ತಿವೆ. 47 ಸಾವಿರ ಕುಟುಂಬಗಳು ವಾಸಿಸುತ್ತಿರುವ ಮನೆಗಳಿಗೆ ಪ್ಲಾಸ್ಟಿಕ್ ಹೊದಿಕೆಗಳೇ ಮಳೆ, ಬಿಸಿಲು, ಗಾಳಿಯಿಂದ ರಕ್ಷಿಸುವ ಉಪಾಯವಾಗಿದೆ. 19.85 ಲಕ್ಷ ಕುಟುಂಬಗಳು, ಸದಸ್ಯರ ಸಂಖ್ಯೆ ಎಷ್ಟೇ ಇದ್ದರೂ ಒಂದೇ ಕೋಣೆಯ ಮನೆಯಲ್ಲಿ ವಾಸವಾಗಿವೆ. ಸರ್ಕಾರ ಕೈಗೊಂಡಿರುವ ನೂರಾರು ಅಭಿವೃದ್ಧಿ ಯೋಜನೆಗಳ ಫಲ ಈ ಕುಟುಂಬಗಳಿಗೆ ತಲುಪುವುದು ಯಾವಾಗ? 'ಗುಡಿಸಲು ರಹಿತ ರಾಜ್ಯ' ಮಾಡುತ್ತೇವೆಂದು ಕಳೆದ ಹತ್ತಾರು ವರ್ಷಗಳಲ್ಲಿ ಬಂದ ವಸತಿ ಮಂತ್ರಿಗಳೆಲ್ಲರೂ ಏಕಕಂಠದಿಂದ ಘೋಷಣೆ ಮಾಡುತ್ತಲೇ ಇದ್ದರೂ ಪರಿಸ್ಥಿತಿ ಏಕೆ ಬದಲಾಗಿಲ್ಲ?

ಸರ್ಕಾರದ ವಾರ್ಷಿಕ ಬಜೆಟ್ ಒಂದು ಲಕ್ಷ ಕೋಟಿ ರೂಪಾಯಿಯ ಗಡಿಯನ್ನು ದಾಟಿ ವರ್ಷಗಳೇ ಉರುಳಿವೆ. ಜನಸಾಮಾನ್ಯರ ಮೇಲೆ ತೆರಿಗೆಯ ಭಾರ ಹೆಚ್ಚುತ್ತಲೇ ಇದೆ. (ಬೇರೆಲ್ಲ ವಸ್ತುಗಳನ್ನು ಬಿಡಿ; ನಾವು ಒಂದು ಲೀಟರ್ ಪೆಟ್ರೋಲ್‌ಗೆ ನೀಡುವ ಅಂದಾಜು 75 ರೂಪಾಯಿಗಳಲ್ಲಿ 35 ರೂಪಾಯಿ ತೆರಿಗೆಯೇ ಇದೆ!) ಎಷ್ಟು ದುಡಿದರೂ ಸಾಲದು ಎನ್ನುವಂತಹ ಸಾಮಾಜಿಕ ದುಸ್ಥಿತಿಗೆ ಕಾರಣರು ಯಾರು? ಸರ್ಕಾರ ಪ್ರಜೆಗಳ ಮೇಲೆ ಹೇರುತ್ತಿರುವ ನೂರಾರು ತೆರಿಗೆಗಳಿಂದ ಸಂಗ್ರಹವಾಗುವ ಹಣದಲ್ಲಿ ಶೇಕಡಾ 63ರಷ್ಟು ಆಡಳಿತದ ಖರ್ಚಿಗೆ ಹೋಗುತ್ತಿದೆ ಎನ್ನುವುದೇ ಒಂದು ದುರಂತ. ಆಡಳಿತ ನಡೆಸಲು, ಸಚಿವರು, ಶಾಸಕರು, ಅಧಿಕಾರಸ್ಥರನ್ನು ಸಲಹಲು ಮತ್ತು ನೌಕರಶಾಹಿಗೆ ಸಂಬಳ ನೀಡಲೇ ಇಷ್ಟೊಂದು ಹಣ ಖರ್ಚಾದರೆ, ಇನ್ನು ಅಭಿವೃದ್ಧಿಗೆ ಹಣ ಎಲ್ಲಿದೆ? ಸಂಬಳ, ಸವಲತ್ತು, ಸಾರಿಗೆಯ ಬಳಿಕ ಉಳಿದ ಶೇಕಡಾ 37ರಷ್ಟು ಕರಸಂಪನ್ಮೂಲದಲ್ಲಿ ಅನುತ್ಪಾದಕ ವೆಚ್ಚದ ಪ್ರಮಾಣವೇ ಅಧಿಕ. ಸರ್ಕಾರದ ಖರ್ಚನ್ನು ಕಡಿಮೆ ಮಾಡಲು, ಆಡಳಿತ ವೆಚ್ಚವನ್ನು ತಗ್ಗಿಸಲು ಉಪಕ್ರಮಗಳನ್ನು ಕೈಗೊಂಡು, ದಕ್ಷ ಆಡಳಿತ ನೀಡಿದರೆ ಸಂಗ್ರಹಿಸಿದ ತೆರಿಗೆಯ ಲಾಭವಾದರೂ ಜನರಿಗೆ ಸಿಕ್ಕೀತು. ಸದ್ಯದ ಪರಿಸ್ಥಿತಿ ನೋಡಿದರೆ, ಅದೂ ಸಾಧ್ಯವಿಲ್ಲ ಎನ್ನುವಂತಿದೆ.

■ ಬಿ.ಎಂ.ಹನೀಫ್



ಈಶ್ವರ್